
# ತೆರಳುವ ಸಂತಸ

ಓಡುವ ಸ್ಕೂಟರ್ ಗಾಡಿಗೆ
ಬ್ರೇಕು ಇದೆ. ಆದರೊಳು ಅಂಟಿ
ಕೂತಿರುವ ಚಿಣ್ಣರ ಖುಷಿಗೆ ಯಾವ ತಡೆಯಿಲ್ಲ
ಬೀಳುವೆನೆಂಬ ಭಯವಿಲ್ಲ, ಅಂಜಿಕೆಯ ಅರಿವಿಲ್ಲ
ಕುತೂಹಲದ ಕಣ್ಣೊಳಗೆ ಜಗವ ಕಾಣುವ ಬೆರಗು,
ಎಲ್ಲಿಗೋ ತೆರಳುವ ಸಂತಸ.

ಗಾಡಿ ಹತ್ತಿದರೆ
ಕೂತರೂ ನಿಂತರೂ ಖುಷಿ–
ಗಾಳಿಯಲಿ ತೇಲುವ ಆನಂದ.

ವೇಗದಿ ಓಡುವ ಗಾಡಿಯೊಳು
ಅದಕೂ ವೇಗದಲಿ
ಬಣ್ಣದ ಕನಸುಗಳ ಕಾಣುವರು
ಹಾದಿಯ ಹೊಣೆ ಸವಾರನಿಗೆ ಬಿಟ್ಟು.
ಕುಣಿದು, ನಲಿದು ಮಾಡುವ
ಕೀಟಲೆಯಂತೆಯೇ ಈ ಸವಾರಿ
ಮುಂದಕೆ ಸಾಗಲೇಬೇಕಾದ ಆಟ.
ಸ್ಕೂಟರ್ ಏರಿ ಮತ್ತೊಮ್ಮೆ
ತಿರುಗಿದರೆಂತು ಸ್ವಚ್ಛಂದವಾಗಿ
ಪುಟ್ಟ ಹಕ್ಕಿಗಳಂತೆ ಹಾರಿದರೆಂತು
ಎಂದು ಕನಸುತಿವೆ
ಮುಗ್ಧ ಮನಸುಗಳು ಮೊಗದ ತುಂಬ
ಬಣ್ಣದ ಹೂನಗೆ ತುಂಬಿಕೊಂಡು.

● **ರಂಜಿತಾ ಹೆಬ್ಬಾರ್**





# ಮಕ್ಕಳಾಟ

ತಲೆಗಳ ಕಾಲುಗಳ ಲೆಕ್ಕ
ಸರಿಯಾಗಿ ಸಿಕ್ಕೀತಾ?
ಜೋರಾಗಿ ತಿರುಗುವ
ಮೂರೋ ನಾಲ್ಕೋ
ತಿಳಿಯದ ಫ್ಯಾನಿನ ರೆಕ್ಕೆಗಳಂತೆ
ಚಲಿಸುವ ಗಾಡಿಯಲಿ
ಇಳಿದವರ ಉಳಿದವರ ಲೆಕ್ಕ
ಹಾಕುವುದು ವ್ಯರ್ಥ.

ರಾಜಕೀಯದ ಮಕ್ಕಳಾಟ ನೆನಪಿಸಿ
ಪಕ್ಷದವರ ತಲೆ ಎಣಿಸಿದರೆ
ಕಾಲುಗಳ ಸಂಖ್ಯೆಗೆ ಹೊಂದುತ್ತಿಲ್ಲವೇ
ಬಿಟ್ಟೋಡಲು ಕಾಲು ಬೇಕು...
ಆದರೆ ಇರಲು ತಲೆ... ಬೇಕೆ?

● **ತಲಕಾಡು ಶ್ರೀನಿಧಿ**